ನಾನು ಅಭಿನಯಿಸಿದ್ದೂ ಅಂಥ ಕಥೆಗಳಲ್ಲೆ. ನನ್ನನ್ನು ಅಪ್ರೋಚ್ ಮಾಡುತ್ತಿರುವುದೂ ಅಂಥ ಕಥೆಗಳಿಗೇ. ತುಂಬಾ ಸರಳ, ಸಹಜ ಹಾಗೂ ನಮ್ಮ ಸುತ್ತಮುತ್ತ ನಡೆಯುವಂಥ ಕಥೆಗಳು ನನಗೆ ಆಕರ್ಷಕ ಎನಿಸುತ್ತವೆ. ಒಬ್ಬ ಸಾಮಾನ್ಯ ಮನುಷ್ಯ ಸಿನಿಮಾದ ಪಾತ್ರವೊಂದರಲ್ಲಿ ತನ್ನನ್ನು ತಾನು ನೋಡಿಕೊಳ್ಳುವಂತಿರಬೇಕು. ಅಂಥ ಕಥೆಗಳು ಜನರನ್ನು ಸುಲಭವಾಗಿ ತಲುಪಬಹುದು ಕೂಡ. ಹೊಸಬಳಾಗಿ, ಮುಂದಿನ ಹಂತಕ್ಕೆ ನನ್ನನ್ನು ತಲುಪಿಸಲು ಇಂಥ ಕಥೆಗಳು ಸಹಾಯವಾಗುತ್ತವೆ ಎಂದು ಅನ್ನಿಸಿದೆ. ಇಂಥ ಪಾತ್ರಗಳನ್ನು ತುಂಬಾ ಅಚ್ಚುಕಟ್ಟಾಗಿ ನಿರ್ವಹಿಸಬಲ್ಲೆ ಎಂಬ ಆತ್ಮವಿಶ್ವಾಸವಿದೆ. ಆದರೆ ಗ್ಲಾಮರಸ್ ಪಾತ್ರಗಳನ್ನು ನಾನಿನ್ನೂ ಎಕ್ಸ್‌ಪ್ಲೋರ್ ಮಾಡಿಲ್ಲ. ರಂಗಭೂಮಿ ಹಿನ್ನೆಲೆಯಿರುವುದರಿಂದ ಯಾವ ಪಾತ್ರವನ್ನೂ ನಾನು ಜಡ್ಜ್‌ಮೆಂಟಲ್ ಆಗಿ ನೋಡುವುದಿಲ್ಲ. ಎಲ್ಲ ಪಾತ್ರಗಳನ್ನೂ ಮಾಡಬಲ್ಲೆ. ಹಾಗೇ, ಕಮರ್ಷಿಯಲ್ ಎಲಿಮೆಂಟ್ ಇರುವಂಥ, ಹಾಡು, ನೃತ್ಯದಲ್ಲಿ ನನ್ನನ್ನು ಕಾಣಬಲ್ಲ ಪಾತ್ರಗಳೂ ಬೇಕಿವೆ.

◆ **ಕಾರ್ಪೊರೇಟ್ ಕಂಪನಿಯಲ್ಲಿದ್ದವರು ನೀವು. ಸಿನಿಮಾಗೆ ಬಂದ ನಂತರ ಗೊಂದಲ ಕಾಡಿದ್ದಿದೆಯೇ?**

'ಕಂಬ್ಳಿಹುಳ' ಸಿನಿಮಾಗೂ ಮುಂಚೆ ಸಿನಿಮಾರಂಗವನ್ನು ನಾನು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಆಗ ಕಾರ್ಪೊರೇಟ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ. ಸಿನಿಮಾ ರಿಲೀಸ್ ಆದ ಮೇಲೆ ಬಂದ ಪ್ರತಿಕ್ರಿಯೆಗಳು, ಚಿತ್ರತಂಡ–ನಿರ್ದೇಶಕರು ಅಪ್ರೋಚ್ ಮಾಡಿದ ರೀತಿ, ನನ್ನ ದಾರಿ ಇಲ್ಲಿ ತೆರೆದುಕೊಳ್ಳುತ್ತಿದೆ ಎಂಬ ಭಾವ ನೀಡಿತು. ಕ್ರಿಯೇಟಿವ್ ಕನೆಕ್ಷನ್‌ಗಳು ಆಗುತ್ತಾ ಹೋದವು. ಈಗ ಈ ಕಲಾರಂಗವನ್ನು ಗಂಭೀರವಾಗಿ ತೆಗೆದುಕೊಂಡಿದ್ದೇನೆ. ಮೂರು ಹೊಸ ತಂಡಗಳ ಸಿನಿಮಾದಲ್ಲಿ ತೊಡಗಿಕೊಂಡೆ. ಈ ಒಂದು ಪಯಣದಲ್ಲಿ ಕಲಿಕೆಯೂ ಮುಂದುವರೆದಿದೆ.

◆ **ನಿಮ್ಮ ಮುಂದಿನ ನಡೆ?**

ಎರಡು ಸಿನಿಮಾಗಳು ಅಂತಿಮ ಹಂತದ ಮಾತುಕತೆಯಲ್ಲಿವೆ. ಸದ್ಯದಲ್ಲೇ ಅವುಗಳ ಘೋಷಣೆ ಆಗಲಿದೆ. ಮೂರು ಸಿನಿಮಾದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ಈ ವರ್ಷದ ಕೊನೆಗೆ ಬಿಡುಗಡೆ ಮಾಡುವ ಆಲೋಚನೆಯಿದೆ. ಸೃಜನಾತ್ಮಕ ನಿರ್ದೇಶಕರ ಜೊತೆ ಕೆಲಸ ಮಾಡುವ ಹುಮ್ಮಸ್ಸೂ ಜೊತೆಗಿದೆ. ■



# ನನ್ನ ಗಮನ ಈಗ ಶಿವಣ್ಣನ ಮೇಲೆ: ಹೇಮಂತ್

ಕಿಚ್ಚ ಸುದೀಪ್‌ಗೆ ನಿರ್ದೇಶಕ ಹೇಮಂತ್, ಹೊಸ ಸಿನಿಮಾ ಮಾಡುತ್ತಿರುವುದಾಗಿ ಈಚೆಗೆ ಸುದ್ದಿಯೊಂದು ಹರಿದಾಡುತ್ತಿರುವ ಬೆನ್ನಲ್ಲೇ ಈ ಕುರಿತು ಹೇಮಂತ್ ಎಂ. ರಾವ್ ಸ್ಪಷ್ಟನೆ ನೀಡಿದ್ದಾರೆ.

ನಟ ಸುದೀಪ್ ಹಾಗೂ ನಿರ್ದೇಶಕ ಹೇಮಂತ್ ರಾವ್ ಇಬ್ಬರೂ ಹೊಸ ಸಿನಿಮಾ ಪ್ರಾಜೆಕ್ಟ್‌ವೊಂದರಲ್ಲಿ ತೊಡಗಿಕೊಂಡಿರುವುದಾಗಿ ಸುದ್ದಿ ಕೇಳಿಬಂದಿತ್ತು. ನಿರ್ಮಾಪಕ ಸಂದೇಶ್ ನಾಗರಾಜ್ ಅವರು ಹಂಚಿಕೊಂಡಿದ್ದ ಫೋಟೊವೊಂದು ಈ ಸುದ್ದಿಗೆ ಮೂಲವಾಗಿತ್ತು. ಆದರೆ ಯಾವುದೇ ಹೊಸ ಪ್ರಾಜೆಕ್ಟ್‌ಗೂ ತಾವು ಸಹಿ ಮಾಡಿಲ್ಲ ಎಂದು ಹೇಮಂತ್ ರಾವ್ ತಿಳಿಸಿದ್ದಾರೆ.

'ಸುದೀಪ್ ಅವರೊಂದಿಗೆ ಕೆಲಸ ಮಾಡುವುದು ಅತಿ ದೊಡ್ಡ ಅವಕಾಶ. ಆ ಅವಕಾಶ ಸಿಕ್ಕರೆ ಖಂಡಿತ ಉಪಯೋಗಿಸಿಕೊಳ್ಳುತ್ತೇನೆ. ಸದ್ಯ ಶಿವಣ್ಣ ಅವರ ಸಿನಿಮಾದಲ್ಲಿ ತೊಡಗಿಕೊಂಡಿರುವುದರಿಂದ ಬೇರೆ ಕಡೆ ನನ್ನ ಚಿತ್ತ ಹರಿಸಿಲ್ಲ. ಒಂದೇ ಸಮಯದಲ್ಲಿ ಎರಡು ಪ್ರಾಜೆಕ್ಟ್‌ನಲ್ಲಿ ನಾನು ತೊಡಗಿಕೊಳ್ಳುವುದಿಲ್ಲ' ಎನ್ನುತ್ತಲೇ, ತಾವು ನಿರ್ದೇಶಿಸಿರುವ ನಾಲ್ಕು ಸಿನಿಮಾಗಳ ನಡುವೆಯೂ ಇದೇ ರೀತಿ ಅಂತರ ಕಾಯ್ದುಕೊಂಡಿದ್ದು, ಒಂದು ಬಾರಿಗೆ ಒಂದೇ ಸಿನಿಮಾದಲ್ಲಿ ತೊಡಗಿಕೊಳ್ಳುವುದಾಗಿ ಹೇಳಿದ್ದಾರೆ.

'ನಾನು ಇದೇ ರೀತಿಯಲ್ಲಿಯೇ ಕೆಲಸ ಮಾಡಲು ಇಚ್ಛಿಸುತ್ತೇನೆ. ನನ್ನ ಶಕ್ತಿ ಹಾಗೂ ಆಲೋಚನೆಯನ್ನು ಒಂದೇ ದಿಕ್ಕಿನತ್ತ ಹರಿಸುತ್ತೇನೆ. ಸದ್ಯ ನನ್ನ ಗಮನವೇನಿದ್ದರೂ ಶಿವಣ್ಣ ಸಿನಿಮಾ ಮೇಲೆ. ಈ ಸಿನಿಮಾದ ಪ್ರಿಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ' ಎಂದು ಮಾಹಿತಿ ನೀಡಿದ್ದಾರೆ. ■

# 'ಹೀರೊ ಕೇಂದ್ರಿತ ಸಿನಿಮಾ ಕಾಲವಿದಲ್ಲ'



'ಮಾರ್ಚ್ 22', 'ಕೃಷ್ಣ ತುಳಸಿ', 'ದಶರಥ' ಒಳಗೊಂಡಂತೆ ಕನ್ನಡದ ಕೆಲವು ಸಿನಿಮಾಗಳಲ್ಲಿ ಅಭಿನಯಿಸಿದ್ದ ನಟಿ ಮೇಘಶ್ರೀ, ಭೋಜಪುರಿ ಸಿನಿಮಾಗಳಲ್ಲಿ ಹೆಚ್ಚು ಮಿಂಚಿದವರು. ಅವರೀಗ 'ಕುಂಟೇಬಿಲ್ಲೆ' ಸಿನಿಮಾ ಮೂಲಕ ಸ್ಯಾಂಡಲ್‌ವುಡ್‌ಗೆ ಕಮ್‌ಬ್ಯಾಕ್ ಮಾಡುತ್ತಿದ್ದಾರೆ.

ಸದ್ಯದ ಸಿನಿಮಾ ಟ್ರೆಂಡ್ ಬಗ್ಗೆ ಮಾತನಾಡಿರುವ ಅವರು, ''ಸಂಪೂರ್ಣ ಹೀರೊ ಕೇಂದ್ರಿತ ಪರಿಕಲ್ಪನೆಯಿಂದ ಸಿನಿಮಾಗಳು ಹೊರಬರಲು ಒಟಿಟಿ ಸಹಾಯ ಮಾಡಿದೆ. ಥಿಯೇಟರ್‌ಗಳಿಗೆ ಜನರನ್ನು ಕರೆತರಲು ಒಳ್ಳೆಯ ಕಂಟೆಂಟ್ ಅಥವಾ ಕಥೆಯೇ ಮುಖ್ಯ ಎಂಬುದು ನಿರ್ದೇಶಕರಿಗೆ ಈಗೀಗ ಅರಿವಾಗುತ್ತಿದೆ. ಇದು ನಟಿಯರಿಗೆ 'ಸ್ಟೀರಿಯೊಟೈಪ್' ಆಗುವುದನ್ನು ತಪ್ಪಿಸುತ್ತಿದೆ. ಹಲವು ಪಾತ್ರಗಳಲ್ಲಿ ತಮ್ಮ ನೈಪುಣ್ಯ ತೋರಲು ಅವಕಾಶವಾಗುತ್ತಿದೆ'' ಎಂದು ಸಂತಸ ವ್ಯಕ್ತಪಡಿಸಿದ್ದಾರೆ. ಈ ಬದಲಾವಣೆ, ನಟಿಯರಿಗೆ ಆಯ್ಕೆ, ಅವಕಾಶಗಳು ಹೆಚ್ಚಲೂ ಕಾರಣವಾಗಿರುವುದಾಗಿ ಹೇಳಿದ್ದಾರೆ.

ಮತ್ತೆ ಸ್ಯಾಂಡಲ್‌ವುಡ್‌ನತ್ತ ಬರುತ್ತಿರುವ ಕುರಿತು ಮಾತನಾಡಿ, 'ನಾನೀಗ ಕನ್ನಡ ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಪ್ರೇಕ್ಷಕರೊಂದಿಗೆ ಪ್ರತಿಸ್ಪಂದಿಸುವಂಥ ಪಾತ್ರಗಳನ್ನು ಆರಿಸಿಕೊಳ್ಳಬೇಕೆಂಬುದು ನನ್ನ ಮಾನದಂಡ. ಅವರ ಮನಸ್ಸಿನ ಮೇಲೆ ಪ್ರಭಾವ ಬೀರುವಂಥ ಪಾತ್ರಗಳೇ ನನ್ನ ಆದ್ಯತೆ' ಎಂದಿದ್ದಾರೆ.

ಕನ್ನಡವಷ್ಟೇ ಅಲ್ಲದೆ, ತೆಲುಗು, ತಮಿಳು ಸಿನಿಮಾರಂಗದಲ್ಲೂ ಮೇಘಶ್ರೀ ಅವರಿಗೆ ಅವಕಾಶಗಳು ಬರುತ್ತಿವೆ. ■